(*b*) the names of the donors;

(*c*) the category to which it was considered by Government to belong, when the High School was sanctioned, whether District Board, Municipal or Aided;

(*d*) who is carrying on the management of the High School and since when;

(*e*) (i) whether receipts have been issued to the donors who have contributed money for the said High School building for the amount paid; (ii) whether Government have audited the accounts in this respect?

A.—**Sri A. G. RAMACHANDRA RAO** (Minister for Law and Education).—

(*a*) Rs. 12,000.

(*b*) Gurukula Samitee, Chunchanakatte Rural High School.

(*c*) Private High School.

(*d*) The District Board is carrying on the management of the High School since 8th June 1952.

(*e*) (i) The donation was adjusted in the bills of Sri Shankare Gowda, contractor for the work. No separate receipt was issued as the amount was adjusted in the bills, (ii) The accounts of the District Board have been audited to the end of 1952-53.

ಶ್ರೀ ಯು. ಎಂ. ಮಾದಪ್ಪ.—ಗುರುಕುಲ ಸಮಿತಿಯವರು ಡಿಸ್ಟ್ರಿಕ್ಟ್ ಬೋರ್ಡ್ ಟ್ರೈಜರಿಯಲ್ಲಿ ಹಣವನ್ನು ಡಿಪಾಜಿಟ್ ಮಾಡಿದ್ದಾರೆಯೇ?

Sri A. G. RAMACHANDRA RAO.—It has passed through the District Board. That is the information I have got.

Sri U. M. MADAPPA.—I want to know whether they have deposited in the taluk treasury or district treasury?

Sri A. G. RAMACHANDRA RAO.—The Government have not received that information so far.

High School at Kengeri.

Q.—171. **Sri A. V. NARASIMHA REDDY** (Bangalore South).—

Will the Government be pleased to state:—

(*a*) whether a proposal was made to them to start a High School at Kengeri, Bangalore South Taluk;

(*b*) when that proposal was made;

(*c*) whether that proposal has been approved?

A.—**Sri A. G. RAMACHANDRA RAO** (Minister for Law and Education).—

(*a*) Yes.

(*b*) In July 1954.

(*c*) No.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಲಾಖೆಯವರು ಇಲ್ಲಿ ಒಂದು ಹೈಸ್ಕೂಲನ್ನು ತೆರೆಯಬೇಕೆಂದು ತಮಗೆ ಶಿಫಾರಸ್ಸು ಮಾಡಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ; ಬೇರೆಯವರು exemption ಮಾಡಿ ಎಂದು ಒಂದು ಅಪ್ಲಿಕೇಷನ್ ಕೊಟ್ಟರು. ಅದಕ್ಕೆ ಸಾಧ್ಯವಿಲ್ಲವೆಂದು ಹೇಳಿದೆವು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಲಾಖೆ ಮುಖಾಂತರ ತಾನೇ ಅರ್ಜಿ ಬಂದಿರುವುದು?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಮುಖ್ಯ ಮಂತ್ರಿಗಳ ಮುಖಾಂತರ ಬಂದಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕೆಂಗೇರಿ ಗುರುಕುಲ ಆಶ್ರಮದವರು ಹೈಸ್ಕೂಲಿಗೆ ಬೇಕಾದ ಕಟ್ಟಡವನ್ನು ಬಿಟ್ಟುಕೊಡುತ್ತೇವೆಂದು ಹೇಳಿದಮೇಲೆ ತಾನೇ ಮುಖ್ಯ ಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದು?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎ. ವಿ. ನರಸಿಂಹರೆಡ್ಡಿ. ಈಗ ಈ ಪ್ರಪೋಸಲ್ ಪರಿಶೀಲನೆ ಮಾಡಿ ಅಲ್ಲಿ ಹೈಸ್ಕೂಲ್ ಪ್ರಾರಂಭ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ವರ್ಷ ಸಾಧ್ಯವಿಲ್ಲವೆಂದು ಅವರಿಗೆ ಜವಾಬು ಕೊಟ್ಟಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮುಂದಿನ ವರ್ಷವಾದರೂ ಇದನ್ನು ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಟಿ. ಕೆಂಪರಾಜ್.—ಕೆಂಗೇರಿ ಗುರುಕುಲ ಆಶ್ರಮದಲ್ಲಿ ಕಟ್ಟಡ ಇದೆ ಅಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೆ ಎಂಬುದು ಎಲ್ಲರಿಗೂ ಗೊತ್ತಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಅಲ್ಲಿ ಇರುವ ಕಟ್ಟಡ ಹೈಸ್ಕೂಲಿಗೆ ಅನುಕೂಲವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಹಳ ಅನುಕೂಲವಾಗಿಲ್ಲ; ಆದರೆ ಅದನ್ನು ಉಪಯೋಗಿಸಿಕೊಳ್ಳಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಬಿ. ಟಿ. ಕೆಂಪರಾಜ್.—ಕೆಂಗೇರಿ ಹೋಬಳಿಯಲ್ಲಿ ಎಷ್ಟು ಮಿಡಲ್ ಸ್ಕೂಲುಗಳಿವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್ ಬೇಕು.

ಶ್ರೀ ಬಿ. ಟಿ. ಕೆಂಪರಾಜ್.—ಅಲ್ಲಿ ಇರತಕ್ಕಂಥ ಮಿಡ್ಲ್‌ಸ್ಕೂಲು ಹುಡುಗರು ಸಿಟಿಗೆ ಬರಬೇಕಾದರೆ 12 ಮೈಲಿ ದೂರದಿಂದ ಬರಬೇಕಾಗುತ್ತದಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕಿಂತಲೂ ದೂರದಿಂದ ಮಿಡ್ಲ್‌ಸ್ಕೂಲ್ ಹುಡುಗರು ಬರುತ್ತಾರೆ.

ಶ್ರೀ ಬಿ. ಟಿ. ಕೆಂಪರಾಜ್.—ಈ ಹೋಬಳಿಯಲ್ಲಿ ಹೈಸ್ಕೂಲ್ ಅತ್ಯಾವಶ್ಯಕ ಎಂದು ಸರ್ಕಾರದವರು ಮನಗಂಡಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು.

Sandalkote Building at Chikmagalur (suitability to locate Intermediate College).

Q.—106. **Srimathi B. L. SUBBAMMA** (Chikmagalur-Mudigere).—

Will the Government be pleased to state :—

(*a*) whether an order has been issued recently that the Sandalkote Building be given away to the Intermediate College at Chikmagalur due to want of sufficient accommodation in the present building in which the said college is now located ;

(*b*) whether the public have not deposited one lakh of rupees for shifting the Sandalkote to some other place;

(*c*) whether they would take steps for the proper maintenance of the college ?

A.—**Sri A. G. RAMACHANDRA RAO** (Minister for Law and Education).—

(*a*) Yes. In November 1952.
(*b*) Yes.
(*c*) Yes.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಇಂಟರ್ ಮೀಡಿಯಟ್ ಕಾಲೇಜಿಗೆ ಸರಿಯಾದ ಕಟ್ಟಡವಿಲ್ಲದೆ ಇರುವುದರಿಂದ, ಚಿಕ್ಕಮಗಳೂರಿನಲ್ಲಿ ಪಬ್ಲಿಕ್ ಲೈಬ್ರೆರಿ, ಟೌನ್‌ಹಾಲ್ ಮತ್ತು ಮುನಿಸಿಪಾಲಿಟಿಗಳಿಗೆ ಸ್ವಳಕ್ಕೆ ಅನಾನುಕೂಲವಾಗಿರುವುದು ಸರ್ಕಾರಕ್ಕೆ ಗೊತ್ತಿದೆಯೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.— ಗೊತ್ತಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇದಕ್ಕೆ ಅನುಕೂಲ ಪಡಿಸಲು ಸರ್ಕಾರದವರು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಾಲೇಜಿಗೆ ಅನುಕೂಲ ಪಡಿಸುವುದಕ್ಕಾಗಿ, ಸ್ಯಾಂಡಲ್ ಕೋಟಿ ಮತ್ತು ಫಾರೆಸ್ಟ್ ನರ್ಸರಿಯನ್ನು ಬೇರೆಕಡೆಗೆ ಹಾಕಿಬಿಡಿ ಎಂದು ತೀರ್ಮಾನ ಮಾಡಿದ್ದೇವೆ, ಮತ್ತು ಇರತಕ್ಕಂಥ ಹಣವನ್ನು ವಿಂಗಡನೆಮಾಡಿ ಜಾಗ್ರತೆ ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ತೀರ್ಮಾನ ಮಾಡಿ ಎರಡು ವರ್ಷಗಳಾದರೂ ಕೂಡ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದೇವೆ. ಯೂನಿವರ್ಸಿಟಿಗೂ ಕೂಡಾ ತಿಳಿಸಿದ್ದೇವೆ.

ಶ್ರೀ ಟಿ. ಸಿ. ಬಸಪ್ಪ.—ಉತ್ತರದಲ್ಲಿ ಒತ್ತಾಯ ಪಡಿಸುತ್ತಿದ್ದೇವೆ ಎಂದು ಹೇಳಿದಿರಿ. ಯಾರನ್ನು ಸ್ವಾಮಿ ತಾವು ಒತ್ತಾಯ ಪಡಿಸುತ್ತಾ ಇರುವುದು ?

Sri A. G. RAMACHANDRA RAO.—Both the University and the Forest Department.

ಶ್ರೀ ಟಿ. ಸಿ. ಬಸಪ್ಪ.—ಹಣ ಡಿಪಾಸಿಟ್ ಮಾಡಿ ಎರಡು ವರ್ಷಗಳಾದರೂ ಇನ್ನೂ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಯಾವ ಇಲಾಖೆಯವರು ಕಾರಣ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲಾ departmentಗಳೂ ಕಾರಣ ಎಂದುಹೇಳಿ ಬಹುದು.

ಶ್ರೀ ಟಿ. ಸಿ. ಬಸಪ್ಪ.—ಸರ್ಕಾರದವರು ಈ ವರ್ಷವಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದಿಂದ ತಡವಾಗುತ್ತಾ ಇಲ್ಲ. ಸರ್ಕಾರದವರು order ಮಾಡಿ ಆಗಿದೆ. ಅದನ್ನು ಜಾಗ್ರತೆ ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಜಿಲ್ಲಾ ಬೋರ್ಡಿನವರು ನರ್ಸರಿ ಜಾಗಕ್ಕೆ 3 ಸಾವಿರ ರೂಪಾಯಿಗಳ ಮೇಲ್ಪಟ್ಟು ಕೊಡಬೇಕೆಂದು ಹೇಳಿರುವುದು ನಿಜವೇ ?

Sri A. G. RAMACHANDRA RAO.—I want notice.

ಶ್ರೀ ಜಿ. ಪುಟ್ಟಸ್ವಾಮಿ.—Compensation ಕೇಳಿರುವುದು ಜಾಸ್ತಿ, ಅದನ್ನು ಕಡಮೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿ ಮಾಡಿರುವುದು ನಿಜವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲನೇ ಪ್ರಶ್ನೆ ಗೊತ್ತಿಲ್ಲ. ಆದ್ದರಿಂದ ಎರಡನೇ ಪ್ರಶ್ನೆಗೆ ಉತ್ತರ ಹೇಗೆ ಹೇಳುವುದು ?

ಶ್ರೀ ಜಿ. ಪುಟ್ಟಸ್ವಾಮಿ.—ಸರ್ಕಾರದಲ್ಲಿ ಈ ಸಂಬಂಧಪಟ್ಟ ರಿಕಾರ್ಡು ಬಾಕಿ ಇದೆ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇನೆ.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—Intermediate College ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಕಟ್ಟಡಗಳಲ್ಲಿ ನಡೆಯುತ್ತಿದೆ ?

ಶ್ರೀ ಎ. ಜಿ ರಾಮಚಂದ್ರರಾವ್.—ಮಾನ್ಯ ಸದಸ್ಯರಿಗೇ ಅದು ಚೆನ್ನಾಗಿ ಗೊತ್ತಿದೆ.

12-30 P.M.

Intermediate College in Malleswaram

Q.—475. **Sri V. R. NAIDU** (Malleswaram).—

Will the Government be pleased to state :—

(*a*) whether the establishment of an Intermediate College in the northern extension of the City, *viz.*, Malleswaram for the benefit of the boy and